

ಸಫಲರಾಗುತ್ತಾರೆ. ಒಂದು ತಮಾಷೆಯ ಉದಾರಹಣೆ ಎಂದರೆ, ನಾನು ಶಾಲೆಯಲ್ಲಿ ಮಕ್ಕಳಿಗೆ ಹೇಳಿಕೊಟ್ಟ ಇಂಗ್ಲಿಷ್ ಪದ್ಯ 'ರಿಂಗ ರಿಂಗ ರೋಸಸ್....' ಅನ್ನು ಕೆಲವು ಮಕ್ಕಳು ತಮ್ಮರಿವಿಗೆ ಬಂದಂತೆ, ಟೀಚರ್ ಬಾಯಿಯ ಉಚ್ಚಾರಣೆಯನ್ನು ಗಮನಿಸಿಕೊಂಡು 'ನಿಂಗ ನಿಂಗ ನೋಸಸ್..' ಎಂದು ಹಾಡಿಕೊಂಡು ಹೋಗಿದ್ದಾರೆ.

## ಎರಡನೇ ಹಂತದ ಪದಗಳ ಕಲಿಕೆ

ಚಿಕ್ಕ ಮಗುವು ಸ್ವಲ್ಪ ಬೆಳವಣಿಗೆ ಹೊಂದಿದಂತೆ, 'ಪದ'ಗಳನ್ನು ಆಲಿಸಲು ಪ್ರಾರಂಭಿಸುತ್ತದೆ. ನಿಜ ಹೇಳಬೇಕೆಂದರೆ ಅವು ಕಲಿಯುವುದು 'ಪದ'ಗಳನ್ನಲ್ಲ. ಅವರು ಕಲಿಯುವುದು ಕೇವಲ ಕನಿಷ್ಠ ಸಾರ್ಥಕ ಪದಾಕೃತಿಗಳನ್ನು (**morpheme**). ಅಂದರೆ ನಿರ್ದಿಷ್ಟವಾದ ಅರ್ಥವಿರುವ ಧ್ವನಿಗಳನ್ನಷ್ಟೇ. ಒಮ್ಮೆ ಹೀಗಾಯಿತು ... 'ಮಂಗ' ಪದಕ್ಕೆ ಬಹುವಚನವಾಗಿ ನಾವು ಬಳಸಿದ 'ಮಂಗಗಳು' ಎಂಬುದನ್ನು ಗಮನಿಸಿ, 'ಮಕ್ಕಳುಗಳು' ಎಂದು ನನ್ನ ಮಗಳು ಹೇಳಿದಳು! ಈ ಲಾಜಿಕ್ ಹೇಗೆ ಮಕ್ಕಳು ಮಾತನಾಡಲು ಬಳಸುತ್ತಾರೆ ಎಂದು ಆಗಲೇ ನನಗೆ ಅರಿವಾದದ್ದು. 'ಗಳು' ಎಂಬುದನ್ನು ಒಂದಕ್ಕಿಂತ ಜಾಸ್ತಿ ಇರುವುದಕ್ಕೆ ಹೇಳುತ್ತಾರೆ ಎಂಬುದನ್ನು ಗಮನಿಸಿ, ಮಕ್ಕಳುಗಳು ಎಂಬ ಪದ ಊಹಿಸಿ ಹೇಳಿರುವುದು.

ಮಕ್ಕಳ ಮಾತಿನ ತಪ್ಪುಗಳು ನಿಜವಾಗಿಯೂ ಸರಿ ಮತ್ತು ಒಳ್ಳೆಯದು!

ನೀವು ನಿಮ್ಮ ಮನೆಗಳಲ್ಲಿ ಗಮನಿಸಿರಬಹುದು, 'ನಿನಗೆ ನೀರು ಬೇಕಾ, ಕೊಡುತ್ತೀನಿ' ಎಂದು ನಾವು ಬಳಸುವ ವಾಕ್ಯದಲ್ಲಿ 'ನೀನು' ಎಂಬುದು 'ತನ್ನನ್ನು' ಉಲ್ಲೇಖಿಸಿ ಹೇಳಲಾಗಿದೆ ಎಂಬುದನ್ನು ಅರಿತ ಮಗು, ನಂತರದಲ್ಲಿ ತಾನು ಆ ಪದವನ್ನು ಅಂತೆಯೇ ಬಳಸಲು ಪ್ರಯತ್ನಿಸುತ್ತದೆ, 'ನಿಂಗೆ ನೀರು ಬೇಕು' ಎಂದು ತನ್ನ ನೀರಿನ ಬೇಡಿಕೆಯನ್ನಿಡುತ್ತದೆ! ವ್ಯಾಕರಣ ತಪ್ಪಿದೆ ನಿಜ, ಆದರೆ ಮಗು ಎಷ್ಟು ಚೆನ್ನಾಗಿ ಅರ್ಥೈಸಿಕೊಂಡಿದೆ, ತನಗಾಗಿ ಉಲ್ಲೇಖಿಸಿದ ಪದವನ್ನು! ಜೀನಿಯಸ್ ಎನ್ನಿಸುವುದಿಲ್ಲವೇ ನಿಮಗೆ?

ನಿನ್ನೆಗೆ ನಾಳೆ ಎನ್ನುವುದು, ತನ್ನನ್ನು ಕರೆದುಕೊಂಡು ಹೋಗಿ ಎನ್ನುವುದಕ್ಕೆ 'ಬಾ ಬಾ' ಎನ್ನುವುದು ಇತ್ಯಾದಿ ನಾವು ಸಾಮಾನ್ಯವಾಗಿ ಬಳಸುವ ಶಬ್ದಗಳನ್ನು, ತನ್ನ ಚಟುವಟಿಕೆಗಳಿಗೆ ಹೋಲಿಸಿಕೊಂಡು ಬಳಸಲು ಮಕ್ಕಳು ಪ್ರಯತ್ನಿಸುತ್ತಾರೆ, ಯಾವುದೇ ಒಂದು ಶಬ್ದಕ್ಕೆ ಅದರ ಹೋಲಿಕೆಯನ್ನು ಮೊದಲು ಅರ್ಥ ಮಾಡಿಕೊಂಡು ನಂತರದಲ್ಲಿ 'ಆ' ಕ್ಕೆ 'ಹ', 'ರ' ಕ್ಕೆ 'ನ', 'ಲ' ಕ್ಕೆ 'ವ' ಈ ರೀತಿಯಾಗಿ ಇತರೆ ಅಕ್ಷರಗಳನ್ನು ಬಳಸಿದರೂ ಸರಿಯಾದ ಪದಗಳನ್ನು ನಿರ್ಮಾಣ ಮಾಡುವ ಹಂತದಲ್ಲಿ ಮಕ್ಕಳಿಂದ ಮಾತಿನ ತಪ್ಪುಗಳು ಸಹಜ. ಸಾಕಷ್ಟು ಕಡೆ ಗಮನಿಸಿದಂತೆ, ಬಣ್ಣ, ಅಕ್ಕರ, ಅಳತೆ ಇವೆಲ್ಲವುಗಳ ಸಂಬಂಧವಾಗಿ ಬಳಸುವ ಶಬ್ದಗಳ ಬಳಕೆ ಮಕ್ಕಳಲ್ಲಿ ಮೊದಲಿಗೆ ತದ್ವಿರುದ್ಧವಾಗಿರುತ್ತದೆ.

ಈ ಪ್ರಸಂಗದಲ್ಲಿ ನನಗೊಂದು ಘಟನೆ ನೆನಪಾಗುತ್ತಿದೆ, ಸಂಬಂಧಿಕರ 2–3 ವರ್ಷದ ಪೋರನೊಬ್ಬ ಒಂದು ಮದುವೆ ಮನೆಯಲ್ಲಿ, 'ನಾನು ಹೆಣ್ ನೋಡಕ್ ಹೋಗ್ತೀನಿ' ಎಂದು ಪದೇ ಪದೇ ಹೇಳುತ್ತಿದ್ದಾಗ ನಮಗೆಲ್ಲರಿಗೂ ಆಶ್ಚರ್ಯ ಮತ್ತು ನಗು! ನಂತರದಲ್ಲಿ ತಿಳಿದಿದ್ದು ಆ ಪುಟ್ಟ ಕಂದ ಹೇಳುತ್ತಿದ್ದುದು ಇಂಗ್ಲಿಷ್ ನ '**Hen**' ಬಗ್ಗೆ ಎಂದು!

## ವಾಕ್ಯ ನಿರ್ಮಾಣ ಹಂತ

2 ವರ್ಷ ಮೇಲ್ಪಟ್ಟ ಮಕ್ಕಳು ತಮಗೆ ತಿಳಿದ ಪದಗಳನ್ನು ಜೋಡಿಸಿ ವಾಕ್ಯವನ್ನು ಮಾಡುವ ಹಂತದಲ್ಲಿರುತ್ತಾರೆ. 'ಅಮ್ಮ ನನಗೆ ಹಾಲು ಕೊಡುತ್ತೀಯಾ?' ಎಂದು ಭಾವಿಸುವ ಬೇಡಿಕೆಗೆ, 'ಅಮ್ಮ ಹಾವು' ಎಂದು ಕೇಳುವಷ್ಟು ಅನುವಾಗುತ್ತಾರೆ. ನಾನು, ನನಗೆ ಎಂದೆಲ್ಲ ಬಳಸುವ ಅಗತ್ಯತೆಯನ್ನು ಮಕ್ಕಳು ಭಾವಿಸುವುದಿಲ್ಲ.

ಕಾಗೆಯೊಂದು ಕೂಗಿದ ಶಬ್ಧವನ್ನು ಆಲಿಸಿ, 'ಕಾಗೆ ಕಾಕಾ...' ಎಂದು ಸಂಭೋದಿಸುತ್ತಾರೆ. 'ಬೈಕು ಅಪ್ಪ..' ಎಂದು ಹೇಳುವ ಅರ್ಥದಲ್ಲಿ ಅಪ್ಪ ಬೈಕಿನಲ್ಲಿ ಹೋದನೆಂದು ಮಗು ತಿಳಿಸುತ್ತದೆ. ಆದರೆ ಯಾವ ಪದದ